ಅಪರಾಧ ನಡೆದಿದೆ, ಪ್ರೊಸೆಷನ್ ಆಗಿರತಕ್ಕಂಥದ್ದು 13-8-94ರಲ್ಲಿ ಈ ಮಧ್ಯೆ ಇವರಿಗೆ, ಗೃಹಸಚಿವರಿಗೆ ಸಂಬಂಧಪಟ್ಟಂತೆ ಯಾರಿಂದಲೂ ಯಾವ ವಿಸ್ಪರಿಂಗ್ ಕೂಡ ಇಲ್ಲ ಎನ್ನುವ ಮಾತನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ಮುಖ್ಯಮಂತ್ರಿಗಳು ನಾನು ಪರ್ಸನಲ್ ಆಗಿ ಅದನ್ನು ತೆಗೆಸಿ ನೋಡುತ್ತೇನೆ ಎಂದು ಹೇಳುತ್ತಿದ್ದಾರೆ. ಆ ರೀತಿ ಇದ್ದರೆ ಮುಂದೆ ಅದಕ್ಕೆ ಬರುತ್ತೇನೆ ಎಂದು ಹೇಳಿದ್ದಾರೆ. ಪ್ರಶ್ನೆ ಇಲ್ಲಿ ಇರತಕ್ಕಂಥದ್ದು ಫೋಟೋ ನೋಡಿದ ಮೇಲೆ ಏನು ಅಪರಾಧಿಗಳು ಇದ್ದಾರೆ . ಮಂತ್ರಿಗಳು ಅವರ ಜೊತೆಯಲ್ಲಿ ಮೆರವಣಿಗೆ ಮಾಡುತ್ತಿದ್ದಾರೆ, ಅವರಿಗೂ ಇವರಿಗೂ ಸಂಬಂಧ ಇದೆ ಎನ್ನುವುದನ್ನು ಹೇಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ತಾವು ನಿರ್ವಿವಾದವಾದಂಥ ರೀತಿಯಲ್ಲಿ ಸಂಬಂಧ ಇದೆ ಎನ್ನುವುದನ್ನು ಹೇಳುವಂಥದ್ದಲ್ಲ. ಆ ದೃಷ್ಟಿಯಿಂದ ನಾನೇ ಪರ್ಸನಲ್ ಆಗಿ ತೆಗೆದು ಅದನ್ನು ವೆರಿಫೈ ಮಾಡಿ ಮಾಡಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ವಿರೋಧ ಪಕ್ಷದ ನಾಯಕರು ಮತ್ತೆ ಮತ್ತೆ ಅದನ್ನು ಒತ್ತಾಯ ಮಾಡತಕ್ಕಂಥದ್ದು ಸರಿಯಲ್ಲ. ಆ ಒಂದು ಅವಕಾಶವನ್ನು ಮುಖ್ಯಮಂತ್ರಿಗಳಿಗೆ ಕೊಡತಕ್ಕಂಥದ್ದು ಅವಶ್ಯಕ ಆಗುತ್ತದೆ. ತದನಂತರ ಮುಂದೆ ಏನು ಬರುತ್ತದೆ, ಅದನ್ನು ನೋಡಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

Sri R.V. Deshapande : We are not satisfied with the answer of the Home Minister nor the Chief Minister. The Chief Minister is trying to shield the Home Minister.

ಇವರು ಸ್ಥಾನದಲ್ಲಿದ್ದು ರಾಜ್ಯದ ಜನತೆಗೆ ಏನು ಪ್ರೊಟೆಕ್ಷನ್ ಕೊಡಬಹುದು? ಅದರ ಬಗ್ಗೆ ಅನುಮಾನ ಇದೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಮಾರಲ್ ವ್ಯಾಲ್ಯೂನ್ ಬಗ್ಗೆ ಮಾತನಾಡುತ್ತಾರೆಯೇ ವಿನಹ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಯಾವುದೋ ನೆವ ಇಟ್ಟುಕೊಂಡು ಹೇಳುತ್ತಾರೆ. ಆದ್ದರಿಂದ ನಮ್ಮ ಪಕ್ಷದವರು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು : ಗೃಹಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಈ ಹೇಳಿಕೆಯನ್ನು ನೀಡಿದ ನಂತರ ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಿ ಸದನದ ಕಲಾಪಗಳನ್ನು ಮುಂದೂಡಿ ಮತ್ತೆ 3 ಗಂಟೆಗೆ ಸೇರೋಣ.

(ಸಭೆಯು 1-55ಕ್ಕೆ ಮುಕ್ತಾಯಗೊಂಡು ಮತ್ತೆ 3-00 ಗಂಟೆಗೆ ಸೇರುವುದು.)

ಸಭೆ ಪುನಃ ಮಧ್ಯಾಹ್ನ 3.30ಕ್ಕೆ ಪ್ರಾರಂಭವಾಯಿತು ಸಭಾಧ್ಯಕ್ಷರಾದ ಶ್ರೀ ವಿ.ಎಸ್.ಕೌಜಲಗಿಯವರು ಪೀಠವನ್ನಲಂಕರಿಸಿದರು)

<u>ವಿತ್ತೀಯ ಕಾರ್ಯಕಾಲಾಪಗಳು</u>

ಅಧ್ಯಕ್ಷರು : ಈಗ 1994-95ನೇ ಸಾಲಿನ ಈ ಕೆಳಕಂಡ ಬೇಡಿಕೆಗಳನ್ನು ಮತಕ್ಕೆ ಹಾಕುವುದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಉನ್ನತ ಶಿಕ್ಷಣ ಸಚಿವರ ಪರವಾಗಿ ಬೇಡಿಕೆಗಳನ್ನು ಮುಂಡಿಸುತ್ತೇನೆ.

Sri D.B. Chandre Gowda : I take serious objection. It is the Demand ಇದು ವಿತ್ತೀಯ ಕಾರ್ಯಕ್ರಮವೇ? It is a Demand for the, whole year. The state is looking forward as to the Minister's behaviour. ಇದಕ್ಕಿಂಥ ದೊಡ್ಡ ಕೆಲಸ ಮಂತ್ರಿಗಳಿಗೆ ಏನಿರುತ್ತದೆ? ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಬೇಡಿಕೆಗಳನ್ನು ಸದನದಲ್ಲಿ ಮಂಡಿಸಿ ಅವುಗಳಿಗೆ ಅನುಮತಿ ಪಡೆದುಕೊಳ್ಳಲು ಬೇರೆ ಮಂತ್ರಿಗಳಿಂದ ಹೇಳಿಸಬೇಕೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಈ ಬೇಡಿಕೆಗಳ ಮೇಲೆ ಈಗಾಗಲೇ ಚರ್ಚೆಯಾಗಿದ್ದು ಉತ್ತರವನ್ನೂ ಸಹ ಕೊಟ್ಟಿದೆ. ತಮ್ಮ ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಬೇಡಿಕೆಗಳಿಗೆ ಅನುಮೋದನೆ ಪಡೆದುಕೊಳ್ಳಲು ಸಂಬಂಧಪಟ್ಟ ಸಚಿವರು ಮೇಲ್ಮನೆಯಲ್ಲಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಏಕೆ ಇಷ್ಟೊಂದು ಬೇಜವಾಬ್ದಾರಿ? ಈ ನೀತಿ ಸರಿಯಲ್ಲ. ಇದು ಸದನಕ್ಕೆ ಶೋಭೆ ತರತಕ್ಕಂಥಾದ್ದಲ್ಲ, ಇದು ಬಹಳ ಅಗೌರವ. ಪ್ರತಿಯೊಂದು ವಿಷಯ ಪ್ರಸ್ತಾಪವಾದಾಗಲೂ ಎಲ್ಲಾದಕ್ಕೂ ನೀವೇ ನಿಂತುಕೊಂಡು ಉತ್ತರ ಕೊಡುವುದು ಸರಿಯಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ : ನಾನು ತಮ್ಮಲ್ಲಿ ಕೈಮುಗಿದು ಪ್ರಾರ್ಥಿಸಿಕೊಳ್ಳುತ್ತೇನೆ. ಇದು ಸರಿಯಲ್ಲ. ಬೇರೆ ಇಲಾಖೆಗೆ ಸಂಬಂಧಿಸಿದಂತೆ ಬೇಡಿಕೆಗಳಿಗೆ ಅನುಮೋದನೆ ಪಡೆದುಕೊಳ್ಳಲು ನೀವೇ ನಿಂತುಕೊಂಡು ಪ್ರತಿಯೊಂದಕ್ಕೂ ಒಪ್ಪಿಗೆ ಪಡೆದುಕೊಳ್ಳುತ್ತೀರಿ. ಅದಕ್ಕೂ ಬೇರೆ ಮಂತ್ರಿಗಳನ್ನು ಬಳಕೆ ಮಾಡುವಂಥ ಸ್ಥಿತಿ ಈ ಶಾಸನ ಸಭೆಗೆ ಏಕೆ ಬೇಕು? ನನಗೆ ಆಶ್ಚರ್ಯವಾಗುತ್ತದೆ. ತಾವು ಹೇಗೆ ಒಪ್ಪಿಕೊಂಡಿದ್ದೀರಿ? I will have to take another objection also. But I do not want.

ಶ್ರೀ ವಾಟಾಳ್ ನಾಗರಾಜ್ : ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆಂಬ ಕಾರಣಕ್ಕಾ ಗಿ ಅವರ ಪರವಾಗಿ ಪ್ರತಿಯೊಂದು ಕೆಲಸವನ್ನು ನೀವೇ ಮಾಡಿತ್ತೀರಾ? ಮಂತ್ರಿಗಳನ್ನು ಕರೆಯಿಸಿ, ಅವರ ಇಲಾಖೆಗಳಿಗೆ ಸಂಬಂಧಿಸಿದ ಬೇಡಿಕೆಗಳ ಬಗ್ಗೆ ಹೇಳಲಿ, ಬೇಡಿಕೆಗಳು ಮತದಾನಕ್ಕೆ ಬರಲಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಬೇಡಿಕೆಗಳ ಮೇಲೆ ಈಗಾಗಲೇ ಚರ್ಚೆಯಾಗಿ, ಉತ್ತರವನ್ನೂ ಕೊಟ್ಟಿರುವ ವಿಷಯದ ಬಗ್ಗೆ . . . . . .

ಶ್ರೀ ಡಿ.ಬಿ. ಚಂದ್ರೇಗೌಡ : ಚರ್ಚೆ, ಉತ್ತರ ಇದನ್ನು ನಾನು ಕೇಳುತ್ತಿಲ್ಲ. ಇಡೀ ಇಲಾಖೆಯ ಸಂಪೂರ್ಣ ಜವಾಬ್ದಾರಿ ಹೊತ್ತ ಮಂತ್ರಿ ಒಂದು ರಾಜ್ಯದ, ಒಂದು ವರ್ಷದ ಆಗು-ಹೋಗುಗಳನ್ನು ನೋಡಬೇಕಾಗಿದ್ದಂಥ ಮಂತ್ರಿ, ಆಯ-ವ್ಯಯ ಮಂಡನೆ ಮಾಡಿರತಕ್ಕ ಮಂತ್ರಿ ತಮ್ಮ ಇಲಾಖಾ ಬೇಡಿಕೆಗಳಿಗೆ ಒಪ್ಪಿಗೆ ಪಡೆಯುವುದಕ್ಕೆ ಈ ಸದನದಲ್ಲಿ

ಇರುವುದಿಲ್ಲವೆಂದರೆ ನಾವು ಏಕೆ ಇಲ್ಲಿ ಇರಬೇಕು? ಇದು ಹುಡುಗಾಟಿಕೆಯೇ?

ಶ್ರೀ ವಾಟಾಳ್ ನಾಗರಾಜ್ : ಸದನ ಸೇರುವಾಗಲೂ ತಡವಾಗಿ ಸೇರುವುದು ಸೇರಿದ ಮೇಲೆ ಮಂತ್ರಿಗಳು ಇರುವುದಿಲ್ಲವೆಂದರೆ ಇಷ್ಟು ಬೇಜವಾಬ್ದಾರಿ ಯಾವತ್ತೂ ಆಗತಕ್ಕದ್ದಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಂತ್ರಿಗಳಿಗೆ ಇದಕ್ಕಿಂತ ಬೇರೆ ಕೆಲಸವಿದ್ದರೆ ಮಂತ್ರಿ ಪದವಿ ಬಿಟ್ಟು ಹೋಗಲಿ. We shall not allow it. It will be a bad precedent.

ಅಧ್ಯಕ್ಷರು : 1994-95ನೇ ಸಾಲಿನ ಈ ಕೆಳಕಂಡ ಬೇಡಿಕೆಗಳನ್ನು ಮತಕ್ಕೆ ಹಾಕುವುದು.

<u>ಬೇಡಿಕೆ ಸಂಖ್ಯೆ : 60 - ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ</u>

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ ' ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 230,29,74,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

<u>ಪ್ರಸ್ತಾವ ಮಂಡಿಸಲಾಯಿತು</u>

ಅಧ್ಯಕ್ಷರು : ನಾನು ಈಗ ಬೇಡಿಕೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ 60ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ(ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು''

<u>ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗೆ ಮಂಜೂರೂ ಮಾಡಲಾಯಿತು</u>

<u>ಬೇಡಿಕೆ ಸಂಖ್ಯೆ 32 - ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು</u>

ಡಾ : ಎ.ಬಿ.ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 374,21

,06,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನು ದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ನಾನು ಈಗ ಬೇಡಿಕೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ 32ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರಿದ ಮೊಬಲಗನ್ನು ಮಂಜೂರು ಮಾಡುವುದು''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗೆ ಮಂಜೂರು ಮಾಡಲಾಯಿತು

ಬೇಡಿಕೆ ಸಂಖ್ಯೆ 33 - ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)

ಶ್ರೀ ಗೋಪಿನಾಥ್ ಆರ್ ಸಾಂಡ್ರಾ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 62,49,79,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 66,29,40,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಮಾನ್ಯ ಈಗ ಬೇಡಿಕೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

'' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ 33ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಗಲನ್ನು ಮಂಜೂರು ಮಾಡುವುದು ''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗೆ ಮಂಜೂರು ಮಾಡಲಾಯಿತು

ಶ್ರೀ ಸಿ. ಭೈರೇಗೌಡ : ಅಧ್ಯಕ್ಷರೆ, ಈಗ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೆನೆಂದರೆ ನಮ್ಮ ಎರಡು ಸದನಗಳ ವಿಷಯ ಸಮಿತಿಯವರು ವರದಿಗಳನ್ನು ಕೊಟ್ಟಿದ್ದಾರೆ. ಆ ವರದಿಗಳನ್ನು ಕೆಲವು ಮಂತ್ರಿಗಳು ಉಲ್ಲೇಖ ಮಾಡಿದ್ದಾರೆ. ಈ ಕಡೆ ಕೂಡ ಉಲ್ಲೇಖ ಮಾಡಿದ್ದಾರೆ. ಇದು ಸದನದ ಸ್ವತ್ತು ಆಗಿದೆ.ಕೆಲವು ಶಿಫಾರಸ್ಸುಗಳನ್ನು ಕೂಡ ಮಾಡಿದ್ದಾರೆ. ಬೇಡಿಕೆಗಳಲ್ಲಿ ಇಲ್ಲದಿದ್ದರೂ ಸಹ ಶಿಫಾರಸ್ಸು ಮಾಡಿದ್ದಾರೆ. ಉದಾಹರಣೆ ಆರ್ಥಿಕ ಇಲಾಖೆಗೆ ಸಂಬಂಧಪಟ್ಟ ವರದಿಯಲ್ಲಿ ಈ ಲಾಟರಿಯನ್ನು ಸಂಪೂರ್ಣವಾಗಿ ಬ್ಯಾನ್ ಮಾಡಬೇಕು ಎನ್ನತಕ್ಕಂಥದ್ದು ಇದೆ.

ಅಧ್ಯಕ್ಷರು : ಈಗ ಆರ್ಥಿಕ ಇಲಾಖೆಯ ಬಗ್ಗೆ ಬಂದಿಲ್ಲ.

ಶ್ರೀ ಸಿ. ಭೈರೇಗೌಡ : ಒಂದೇ ನಿಮಿಷ ಹೇಳಿಬಿಡುತ್ತೇನೆ. ಅದೇ ರೀತಿಯಲ್ಲಿ ಸಂಪೂರ್ಣವಾದಂತಹ ಪಾನ ನಿರೋಧವನ್ನು ಜಾರಿಗೆ ತರಬೇಕೆಂದೂ ಸಹ ಈ ವರದಿಯಲ್ಲಿ ನಮೂದಾಗಿದೆ. ಆದುದರಿಂದ ಇವತ್ತಿನ ದಿವಸ ಸರ್ಕಾರವನ್ನು . . . .

ಶ್ರೀ ಕಾಗೋಡು ತಿಮ್ಮಪ್ಪ : ಅದನ್ನು ಮತಕ್ಕೆ ಹಾಕಿದ್ದೇವೆ.

ಶ್ರೀ ಸಿ. ಭೈರೇಗೌಡ : ಉದಾರಣೆಗೆ ಎಂದು ಹೇಳಿದ್ದುದು. ಈಗ ಸ್ವಲ್ಪ ಹೊತ್ತಿಗೆ ಅದನ್ನು ಹಾಕುತ್ತೀರಿ. ಆದುದರಿಂದ ಈಗ ತಾವು ಮತಕ್ಕೆ ಯಾವುದು ಹಾಕುತ್ತೀರೊ, ಆ ಇಲಾಖೆಗೆ ಸಂಬಂಧಪಟ್ಟ ವಿಷಯ ಸಮಿತಿಗಳು ವರದಿಗಳನ್ನು ಕೊಟ್ಟಿದ್ದಾರೆ. ಅವುಗಳ ಗತಿ ಏನಾಯಿತು. ಅದಕ್ಕೆ ಸರ್ಕಾರ ಒಪ್ಪಿದೆಯೋ ಇಲ್ಲವೊ, ಎಂಬುದನ್ನು ಹೇಳಬೇಕು ಇಲ್ಲದಿದ್ದರೆ ಈ ವಿಷಯ ಸಮಿತಿಗಳ ರಚನೆ ಏನಾಗಿದೆ ಮತ್ತು ಮಾಡಿರತಕ್ಕ ಕೆಲಸ ಏನಾಗಿದೆ. ಅದು ಅಷ್ಟು ಕೂಡ ವ್ಯರ್ಥವಾಗುತ್ತದೆ. It is a fertile exercise ಆಗುತ್ತದೆ. ಆದುದರಿಂದ ಸರ್ಕಾರದ ಅಭಿಪ್ರಾಯ ಏನು ಇದೆ ಆ ವರದಿಗಳನ್ನು ಏನಾದರೂ ತಿದ್ದುಪಡಿ ರೂಪದಲ್ಲಿ ತಂದು, ಒಪ್ಪುತ್ತಾರೆಯೆ ಅಥವಾ ಈ ವರದಿ ಇರುವಂಥಾದ್ದನ್ನೇ ಒಪ್ಪಿದ್ದೇವೆ, ಒಪ್ಪಿಲ್ಲವೆಂದು ಸರ್ಕಾರ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ನಾವು ವರದಿಯನ್ನು ಏನು ಕೊಟ್ಟಿದ್ದೇವೆ. ಅದು ಹಾಗೆಯೇ ಇರುತ್ತದೆ. ಇದರಿಂದ ನಮ್ಮ ಉದ್ದೇಶ ಏನು ಸಾಧನೆಯಾಗಬೇಕೆಂದು ಇದೆ. ಆ ಉದ್ದೇಶ ಸಾಧನೆಯಾಗುವುದಿಲ್ಲ, ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಅಧ್ಯಕ್ಷರು : ಭೈರೇಗೌಡರೆ ತಾವು ಏನು ಶಿಫಾರಸ್ಸು ಮಾಡಿದ್ದೀರಿ ಅದನ್ನು ಜಾರಿಗೆ ತರುವುದಕ್ಕೆ ಅವರಿಗೆ ಕಾಲಾವಕಾಶ ಇರಬೇಕು, ಅವರು ಅದನ್ನು ಪರಿಶೀಲನೆ ಮಾಡಿ ತಮಗೆ ವರದಿಯನ್ನು ಹೇಳುತ್ತಾರೆ.

ಶ್ರೀ ಸಿ. ಭೈರೇಗೌಡ : ತತ್‌ತಕ್ಷಣ ಜಾರಿಗೆ ತರುವಂತಹ ವಿಚಾರಗಳಿವೆ. ಅದನ್ನು ತಾವು ಕೂಡ ಒಪ್ಪಬೇಕಲ್ಲ.

ಅಧ್ಯಕ್ಷರು : ತತ್‌ತಕ್ಷಣ ಅಲ್ಲ, ಅದಕ್ಕೆ ಕಾಲಾವಕಾಶವಿದೆ, ನಮ್ಮ ರೂಲ್ಸ್‌ನಲ್ಲಿ ಮಾಡಿಕೊಂಡಿದ್ದೇವೆ. ಸರ್ಕಾರ ನಮಗೆ ಯಾವುದು ಒಪ್ಪಿಕೊಳ್ಳುವುದಿದೆ, ಅದನ್ನು ಒಪ್ಪಿಕೊಂಡು ಜಾರಿಗೆ ತರುತ್ತದೆ.

ಶ್ರೀ ಸಿ. ಭೈರೇಗೌಡ : ಅದರ ಮಾಹಿತಿ ಬೇಕಲ್ಲವೇ ತತ್‌ತಕ್ಷಣ ಒಪ್ಪಿಕೊಳ್ಳಬೇಕು ಎನ್ನುವುದು ಇದೆ. ನಮಗೆ ಮಾಹಿತಿ ಬೇಕು, ಈ ಸದನಕ್ಕೆ ಏನು ಒಪ್ಪಿದ್ದಾರೆ ಏನು ಒಪ್ಪಿಲ್ಲ ಎಂಬುದು ಗೊತ್ತಾಗಬೇಕಾಗುತ್ತದೆ.

ಅಧ್ಯಕ್ಷರು : ಅವರಿಗೆ 3 ತಿಂಗಳು ಕಾಲಾವಕಾಶವಿರುತ್ತದೆ ಅದನ್ನು ಅವರು ಹೇಳುತ್ತಾರೆ.

<u>1994-95ನೇ ಸಾಲಿನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ ಮತ್ತು ಉತ್ತರ</u>

* ಶ್ರೀ ಆರ್ ಎನ್.ನಾಯಕ್ (ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಇಲಾಖೆಯ ಮೇಲೆ ನಮ್ಮ ಶಾಸಕ ಮಿತ್ರರಾದಂತಹ ಶ್ರೀ ವಾಟಾಳ್ ನಾಗರಾಜ್‌ರವರು ವರದಿಯನ್ನು ಸಲ್ಲಿಸಿದ್ದಾರೆ. ಅಲ್ಲದೇ ಅವರು ತಮ್ಮ ಭಾಷಣದಲ್ಲೂ ಸಹ ಈ ವಿಷಯದ ಮೇಲೆ ಅಪೂರ್ಣವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ತಮಗೆಲ್ಲಾ ಗೊತ್ತಿರುವ ಹಾಗೆ ಶ್ರೀ ವಾಟಾಳ್ ನಾಗರಾಜ್‌ರವರು ಕನ್ನಡದ ಅಪ್ರತಿಮ ನಂ. 1 ಹೋರಾಟಗಾರರು. ಅವರು ಬಹಳ ವರ್ಷಗಳಿಂದ ಅವರ ಸಂಪೂರ್ಣ ಶಕ್ತಿಯನ್ನು ಕನ್ನಡದ ಹೋರಾಟಕ್ಕೆ . ಕನ್ನಡ ಬೆಳವಣಿಗೆಗಾಗಿ ವ್ಯಯ ಮಾಡಿದ್ದಾರೆ. ಅವರು ಆಗಾಗ ಮಾತನಾಡುವಾಗ ನಮಗೆ ಅನ್ನಿಸುತ್ತಿತ್ತು. ಇವರು ಹೆಚ್ಚಾಗಿ ಮಾತನಾಡುತ್ತಾರೊ ಏನು ಗೊತ್ತಿಲ್ಲ, ಕನ್ನಡದ ಬಗ್ಗೆ ಹೇಳುತ್ತಾರೆ ಎಂದು ಹಾಗೆ ಅನ್ನಿಸುತ್ತಿತ್ತು. ಆದರೆ ಅವರ ಮುಖಂಡತ್ವದಲ್ಲಿ ಕೊಟ್ಟಿರುವಂತಹ ವರದಿ ಸಂಪೂರ್ಣವಾದಂತಹ ಕನ್ನಡದ ಮೇಲೆ ಇರುವ ಎಲ್ಲಾ ಆಲೋಚನೆಗಳನ್ನು ಇದರಲ್ಲಿ ಭಟ್ಟಿ ಇಳಿಸಿ ಒಂದು ಪುಸ್ತಕ ರೂಪದಲ್ಲಿ ಇವತ್ತು ನಮ್ಮ ಮುಂದಿಟ್ಟಿದ್ದಾರೆ. ಇದು ಅತ್ಯಂತ ಬೆಲೆಯುಳ್ಳ ಪುಸ್ತಕವಾಗಿ ಇತಿಹಾಸದಲ್ಲೇ ದಾಖಲಾಗಲಿದೆ. ಈ ಪುಸ್ತಕದ ವರದಿಯ 18 ಮತ್ತು 19ನೆ ಮಟ್ಟದಲ್ಲಿ ಕನ್ನಡದ ಸಮಗ್ರ ಬೆಳವಣಿಗಾಗಿ ಈ ರಾಜ್ಯದಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ ಸುಮಾರು 23 ಸಲಹೆಗಳನ್ನು ನೀಡಿದ್ದಾರೆ. ಸಮಯದ ಅಭಾವದಿಂದ ಅವುಗಳನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಈ ವಿಚಾರದಲ್ಲಿ ಒಂದು ಕಡೆ ಹೇಳುವುದಾದರೆ ಅವರ ಇಷ್ಟೆಲ್ಲಾ ಸೂಚನೆಗಳನ್ನು ಪಾಲಿಸುವುದಕ್ಕೆ ಈ ಇಲಾಖೆಗೆ ಹಣಕಾಸಿನ ವ್ಯವಸ್ಥೆಯನ್ನು ಜಾಸ್ತಿ ಮಾಡಬೇಕಾಗುತ್ತದೆ. ಅದು ಒಂದೇ ಬಾರಿಗೆ ಸಾಧ್ಯವಿಲ್ಲವಾದದೂ ಸಹ ಇನ್ನು ಮುಂದಿನ ಅನುಭವದ ಮೇಲೆ ಹಣಕಾಸನ್ನು ಜಾಸ್ತಿಯಾಗಿ ಈ ಇಲಾಖೆಗೆ ಹೊಂದಿಸಿಕೊಂಡರೆ ಈ ಸಮಿತಿ ಕೊಟ್ಟು ವರದಿಯನ್ನು ಸಂಪೂರ್ಣವಾಗಿ ಜಾರಿಯಲ್ಲಿ ತರುವುದಕ್ಕೆ ಇಲ್ಲಿ ಸಾಧ್ಯವಿದೆ ಎಂದು ನಾನು ತಿಳಿಸುತ್ತೇನೆ ಬಹುಶಃ ಇಲ್ಲಿ ನಾನು ಬಹಳಷ್ಟು ವಿಷಯಗಳನ್ನು ಹೇಳುವ ಅವಶ್ಯಕತೆ ಕಾಣುವುದಿಲ್ಲ. ಅವರು ಕೆಲವು